

# ಕುಫ್ರಿ

## ನಿಸರ್ಗವೇ ಕಡೆದ ಹಿಮದ ಕುಠ್ಫಿ!

■ ರೂಪಾ ಕೆ.ಎಂ.

ಶಿಮ್ಲಾ ಪ್ರವಾಸಕ್ಕೆ ಹೋಗುವುದು ಎಂದು ನಿಕ್ಕಿಯಾದ ಕೂಡಲೇ ಹಿಮಮಳೆಯ ತಾಣ 'ಕುಫ್ರಿ' ನೋಡುವ ಯೋಜನೆಯು ಪ್ರವಾಸ ವೇಳಾಪಟ್ಟಿಯಲ್ಲಿ ಇಂಥ ದಿನ, ಇಷ್ಟು ಸಮಯಕ್ಕೆ ಅಂತ ನಿಗದಿಯಾಗಿಬಿಟ್ಟಿತು. ಅದಕ್ಕೂ ಮುನ್ನ ಹರಿದ್ವಾರ, ಮಸೂರಿಯ ಬಿರುಬೇಸಿಗೆಯಲ್ಲಿ ಬೆವರುಹರಿಸಿದ್ದ ನಮಗೆ ಹಿಮದ ರಾಶಿಗೆ ಒರಗುವ ಕಲ್ಪನೆಯೇ ಹಿತ ನೀಡುತ್ತಿತ್ತು.

ಶಿಮ್ಲಾ ನಗರದಿಂದ 20 ಕಿ.ಮೀ ದೂರದಲ್ಲಿರುವ ಬೆಟ್ಟದ ತುದಿಯಲ್ಲಿರುವ ಹಳ್ಳಿ ಕುಫ್ರಿ. ಎರಡು ಸಾವಿರದಷ್ಟು ಜನಸಂಖ್ಯೆ ಇರುವ ಈ ಪುಟ್ಟ ಹಳ್ಳಿ ಮೇ ತಿಂಗಳಾಂತ್ಯದವರೆಗೂ ಮಂಜು ಮುಸುಕಿದ ಹಾದಿಯೇ.

ಇದರ ಹೆಬ್ಬಾಗಿಲಿನವರೆಗಷ್ಟೆ ಟ್ಯಾಕ್ಸಿ ಸೇವೆ. ಅಲ್ಲಿಂದ ಪ್ರವಾಸಿಗರನ್ನೇ ನೆಚ್ಚಿಕೊಂಡಿರುವ ಬಹುಕೃತ ವೇಷಧಾರಿ ಬಾಡಿಗೆದಾರರ ಪಡೆ ನಮ್ಮನ್ನು ಸುತ್ತುಗಟ್ಟಿತು. ಕಾಲುಚೀಲ, ಕೈಗವಸು, ಬೂಟ್ಸ್, ಮೈ ಬೆಚ್ಚಗೆ ಇಡುವ ಬಟ್ಟೆಗಳ ಬಾಡಿಗೆ ವೆಚ್ಚ, ಕುದುರೆ ಸವಾರಿ ಎಲ್ಲ ಸೇರಿ ತಲೆಗಿಷ್ಟು ಎಂದು ಪ್ಯಾಕೇಜ್‌ಗಳ ಪಟ್ಟಿಯನ್ನೇ ಮುಂದಿಟ್ಟಿತು. ಅದು ದುಬಾರಿಯೆನಿಸಿ ಮುಂದಕ್ಕೆ ಹೋದರೆ, ಅರ್ಧ ಕಿ.ಮೀ. ದೂರದಲ್ಲಿ ಮತ್ತೊಂದು ಪಡೆ ಚೌಕಾಸಿಗೆ ನಿಂತಿತು. ಕುದುರೆ ಸವಾರಿಯ ಪಾಯಿಂಟ್‌ವರೆಗೂ ನಡೆದು ಹೋಗುವ ತ್ರಾಣ ಇಲ್ಲವಾದ್ದರಿಂದ ಅಂತೂ ಒಂದು ಚೌಕಾಸಿ ನಡೆದು, ಬೂಟ್ಸ್ ಮಾತ್ರ ಬಾಡಿಗೆ ಪಡೆದು ಕುದುರೆ ಸವಾರಿಯ ಪುಳಕವನ್ನು ಅನುಭವಿಸಲು ನಿರ್ಧರಿಸಿದೆವು. ಅದಕ್ಕೂ ಮೊದಲು ಯುದ್ಧಕ್ಕೆ ಸನ್ನದ್ಧರಾದವರಂತೆ ದೊಡ್ಡ ದೊಡ್ಡ ಬೂಟ್ಸ್ ತೊಡಲು ಸರತಿ ಸಾಲಿನಲ್ಲಿ ನಿಂತೆವು. ಒಂದು ರಾಶಿ ಬೂಟ್ಸ್ ನಡುವೆ ಊರಿದ ಪಾದಗಳ ಅಳತೆಯನ್ನು ಕಣ್ಣಲ್ಲೇ ಅಂದಾಜಿಸಿದ ಅದರ ಮೇಲ್ವಿಚಾರಕ, ಕೆಸರು ಮೆತ್ತಿಕೊಂಡಿದ್ದ, ಇರುವುದರಲ್ಲಿ ಚಿಕ್ಕ ಅಳತೆಯ ಬೂಟ್ಸ್ ಹಿಡಿದು 'ಇದು ಸರಿಹೊಂದುತ್ತದೆ' ಎಂದು ದೇಶಾವರಿ ನಗೆ ನಕ್ಕ. ಅಂತೂ ದೊಡ್ಡ ದೊಡ್ಡ ಬೂಟ್ಸ್ ತೊಟ್ಟು ಕುದುರೆ ಸವಾರಿಯ ಪಾಯಿಂಟ್ ತಲುಪಿದೆವು.

### ಕಣಿವೆಯಲ್ಲಿ ಖುರಪುಟದ ಸದ್ದು!

ಕಣಿವೆಯ ಹಾದಿ ಬಳಸಿ ಬೆಟ್ಟದ ತುದಿಯಲ್ಲಿರುವ ಕುಫ್ರಿ ತಲುಪಲು ಕುದುರೆ ಸವಾರಿ ಅನಿವಾರ್ಯ. ಕಣಿವೆಯ ಈ ತುದಿಯಿಂದ ಬೆಟ್ಟದ ಆ ತುದಿಗೆ ಮೂರು ಕಿ.ಮೀ ಅಂತರ. ಆದರೆ, ಸುತ್ತುಗಟ್ಟಿ